



ಎಲ್ಲವನ್ನೂ, ಎಲ್ಲರನ್ನೂ ಸಂಭಾಳಿಸಿಕೊಂಡು ಹೋಗುವುದರಿಂದಲೇ 'ಗೃಹಿಣೀ ಗೃಹಮುಚ್ಯತೇ' ಎಂದು ಸಂಸ್ಕೃತದಲ್ಲಿ ಹೇಳಿರುವುದು. ಸದ್ಗೃಹಿಣಿಯ ಸಹಕಾರವಿಲ್ಲದೇ ಯಾವ ಗೃಹವೂ ಉನ್ನತ ಮಟ್ಟಕ್ಕೆ ಏರಲು ಸಾಧ್ಯವಿಲ್ಲ. ಒಂದು ಮನೆ ಸಾರ್ಥಕವಾಗಬೇಕಾದರೆ, ಆ ಮನೆಗೆ ಪ್ರೀತಿ, ವಾತ್ಸಲ್ಯ ಹಾಗೂ ಸಾಮರಸ್ಯದ ಬುನಾದಿ ಇರಬೇಕು. ಸೌಹಾರ್ದತೆ, ನಂಬಿಕೆ, ಪ್ರೀತಿ, ಸಹನೆಯೆಂಬ ಗೋಡೆಗಳ ಆಧಾರವಿರಬೇಕು. ಹಾಗಾದರೆ ಮಾತ್ರ ಆ ಮನೆ, ಮನೆ ಎಂದೆನಿಸಿಕೊಳ್ಳುತ್ತದೆ.

ಮನೆಯನ್ನು ಆ ರೀತಿ ಇರುವಂತೆ ಮಾಡುವವಳು ಗೃಹಿಣಿ ಮಾತ್ರ! ಗೃಹಿಣಿ ಎಂದಾಕ್ಷಣ, ಮನೆವಾರ್ತೆ ನೋಡಿಕೊಂಡು, ಮನೆಯ ಎಲ್ಲಾ ಕೆಲಸಗಳನ್ನೂ ಮಾಡಿಕೊಂಡು ಮನೆಯಲ್ಲಿರುವವಳು ಮಾತ್ರ ಅಲ್ಲ. ಹೊರಗೆ ಹೋಗಿ ಕೆಲಸ ಮಾಡಿ ಸಂಪಾದಿಸುವಾಕೆಯೂ ಸಹಾ ಗೃಹಿಣಿಯೇ! ಗೃಹಿಣಿ ಇಲ್ಲದ ಮನೆ ಮನೆಯಲ್ಲ. ಗೃಹಿಣಿಯೇ ಮನೆ. ಆದರೆ ಬಹಳಷ್ಟು ಮಂದಿ ಹೇಳುವುದು, ಗೃಹಿಣಿಯೆಂದರೆ, ಏನೂ ಕೆಲಸವಿಲ್ಲದವಳು ಎಂದು! ಒಬ್ಬ ಮಹಿಳೆ ಆರ್ಥಿಕವಾಗಿ ಸಮರ್ಥಳಾಗಿದ್ದರೆ, ಮಾತ್ರ ಆಕೆಗೆ ಬೆಲೆ. ಈ ರೀತಿ ಆರ್ಥಿಕವಾಗಿ ದುಡಿಯುತ್ತಿರುವ ಮಹಿಳೆಯರೇ ಮಹಿಳೆಯರಿಗೆ ಸಾಮಾನ್ಯವಾಗಿ ಕೇಳುವ ಪ್ರಶ್ನೆಯೆಂದರೆ, 'ನೀವು ಗೃಹಿಣಿಯಾ? ಮನೆಯಲ್ಲೇ ಇರುತ್ತೀರಾ? ಹಾಗಾದರೆ ಮನೆಯಲ್ಲಿ ಹೇಗೆ ಟೈಮ್ ಪಾಸ್ ಮಾಡುತ್ತೀರಾ?' ಎಂದು!

ಪಾಸ್ ಮಾಡಲು ಟೈಮ್ ಇದ್ದರೆ ತಾನೇ? ಗೃಹಿಣಿಯ ಕೆಲಸವೆಂದರೆ, ಬೆಳಗ್ಗೆ 9 ರಿಂದ ಸಂಜೆ 5 ರ ತನಕದ ಕೆಲಸವಲ್ಲ. ಬೆಳಗ್ಗೆ ಕಣ್ಣು ಬಿಟ್ಟಾಗಿನಿಂದ ರಾತ್ರಿ ಕಣ್ಣು ಮುಚ್ಚುವವರೆಗೂ ನಿರಂತರವಾಗಿ ಬಿಡುವಿಲ್ಲದೆ ಮಾಡುವ ಜವಾಬ್ದಾರಿಯುತ ಕೆಲಸಗಳು.

## ನಿರಂತರ ದುಡಿತ!

ಮನೆಯಲ್ಲಿ ಸಂಬಳವಿಲ್ಲದೆ, ರಜೆಯಿಲ್ಲದೆ, ಪ್ರಶಂಸೆಯಿಲ್ಲದೆ ಕೆಲಸ ಮಾಡುವ ಗೃಹಿಣಿಯರಿಗೆ ಸಿಗುವ ಪಾರಿತೋಷಕವೆಂದರೆ, ಕೆಲಸವಿಲ್ಲದವರೆಂಬ ಬಿರುದು. ಎಂತಹ ವಿಪರ್ಯಾಸವಲ್ಲವೇ? ಮಾನವನ ದೇಹದ ಎಲ್ಲಾ ಅಂಗಗಳೂ ಮುಖ್ಯವೇ. ಅದರಲ್ಲೂ ಗೃಹಿಣಿಯನ್ನು ಹೃದಯಕ್ಕೆ ಹೋಲಿಸಬಹುದು. ಬೇರೆ ಎಲ್ಲಾ ಅಂಗಗಳಿಗೂ ವಿಶ್ರಾಂತಿ ಸಿಕ್ಕ ಹಾಗೆ ಹೃದಯದ ಬಡಿತಕ್ಕೆ ವಿಶ್ರಾಂತಿ ಸಿಗುವುದಿಲ್ಲ. ಹಾಗೆಯೇ ಗೃಹಿಣಿಯದು ಬಿಡುವಿಲ್ಲದ ನಿರಂತರ ದುಡಿತ!

ಮಹಿಳೆಯು ಮನೆಯಲ್ಲಿ ಮಗಳಾಗಿ, ಹೆಂಡತಿಯಾಗಿ, ಸೊಸೆಯಾಗಿ, ತಾಯಿಯಾಗಿ ಇರಬಲ್ಲವಳಾದರೆ, ಆಕೆ ಶಿಕ್ಷಕಿಯಾಗಿ, ವೈದ್ಯೆಯಾಗಿ, ಪೊಲೀಸ್ ಆಗಿ, ಪೈಲಟ್ ಕೂಡಾ ಆಗಬಲ್ಲಳು. ಗಂಡಸು ನಿಭಾಯಿಸುವ ಎಲ್ಲಾ ಕೆಲಸವನ್ನೂ ಮಹಿಳೆ ನಿಭಾಯಿಸಬಲ್ಲಳು. ಆದರೆ ಪುರುಷ ಮಾತ್ರ ಗೃಹಿಣಿಯಾಗಲು ಸಾಧ್ಯವಿಲ್ಲ! ಗೃಹಿಣಿಯಾದವಳು ಕೂಡಾ ತಾನು ಗೃಹಿಣಿ ಎಂದು ಹೇಳಿಕೊಳ್ಳಲು ಹಿಂದೇಟು ಹಾಕುವುದುಂಟು.

ಮನೆಯಿಂದ ಹೊರ ಹೋಗಿ ದುಡಿಯುವ ಕೆಲಸ ಅತಿ ಚಿಕ್ಕದಾದರೂ, ದುಡಿಮೆ ಎಷ್ಟೇ ಕಡಿಮೆಯಿದ್ದರೂ, ಮಹಿಳೆಯರು ತಮ್ಮನ್ನು ತಾವು ಗುರುತಿಸಿಕೊಳ್ಳುವುದು ಆ ಕೆಲಸದಿಂದಲೇ ಹೊರತು, ಶ್ರೇಷ್ಠವಾದ ಗೃಹಿಣಿ ಎಂದಲ್ಲ. ಮಹಿಳೆಯರೇ, ಗೃಹಿಣಿ ಎಂದು ಹೇಳಿಕೊಳ್ಳಲು ಸಂಕೋಚಪಡಬೇಡಿ. ಇದು ಎಲ್ಲಾ ಕೆಲಸಗಳಿಗಿಂತಲೂ ಉತ್ತಮವಾದದ್ದು. ಏನನ್ನೂ ಬಯಸದೇ ನಿಸ್ವಾರ್ಥದಿಂದ ಮನೆವಾರ್ತೆಯನ್ನು ನೋಡಿಕೊಂಡು, ಮಕ್ಕಳನ್ನು, ಹಿರಿಯರನ್ನು ಸಂಭಾಳಿಸಿಕೊಂಡು ಹೋಗುವುದೇ ಗೃಹಿಣಿಯ ಕೆಲಸ.

ಹೊರಗೆ ಹೋಗಿ ದುಡಿಯುತ್ತಿಲ್ಲ, ಆರ್ಥಿಕವಾಗಿ ಕುಟುಂಬಕ್ಕೆ ನೆರವಾಗುತ್ತಿಲ್ಲ ಎಂಬುದನ್ನು ಮನಸ್ಸಿನಿಂದ ತೆಗೆದು ಹಾಕಿ. ಬದಲಿಗೆ ಮನೆವಾರ್ತೆಯನ್ನು ನೋಡಿಕೊಂಡು ಎಷ್ಟು ಹಣವನ್ನು ಉಳಿಸುತ್ತಿದ್ದೀರಿ ಎಂದು ಯೋಚಿಸಿ. ಗಳಿಸುವಷ್ಟೇ ಮುಖ್ಯ ಉಳಿಸುವುದೂ ಕೂಡಾ! ಬಹಳಷ್ಟು ಸಂದರ್ಭಗಳಲ್ಲಿ ಆಪದ್ಧನವಾಗಿ ಉಪಯೋಗವಾಗುವುದು ಗೃಹಿಣಿಯ ಉಳಿತಾಯವೇ ಹೊರತು ನಿಮ್ಮ ಬ್ಯಾಂಕ್ ಬ್ಯಾಲೆನ್ಸ್ ಅಲ್ಲ. ಒಬ್ಬ ಪುರುಷ ಸಂತೋಷದಿಂದ, ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾನೆಂದರೆ, ಆತನ ಹೆಂಡತಿ ಒಬ್ಬ ಸದ್ಗೃಹಿಣಿಯಾಗಿದ್ದರೆ ಮಾತ್ರ ಸಾಧ್ಯ! ನೀವೊಬ್ಬ ಗೃಹಿಣಿಯಾಗಿದ್ದರೆ, ಹೆಮ್ಮೆ ಪಡಿ. ಏನೂ ಮಾಡುತ್ತಿಲ್ಲ ಎಂಬುದನ್ನು ಮನಸ್ಸಿನಾಳದಿಂದ ಕಿತ್ತು ಹಾಕಿ.

## ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಿ...

ಮನೆಯನ್ನು ನೋಡಿಕೊಳ್ಳುವ ಜೊತೆಗೆ ಗೃಹಿಣಿಯಾದವಳು ತನ್ನ ಬಗ್ಗೆಯೂ ಗಮನಹರಿಸಬೇಕು. ಆಕೆಯ ಆರೋಗ್ಯ ಹಾಗೂ ಸಂತೋಷ ಬಹಳ ಮುಖ್ಯ. ಮನೆಯಲ್ಲಿ ಮನೆಯ ಯಜಮಾನಿ ಸಂತಸದಿಂದಿದ್ದರೆ, ಮನೆಯ ಇತರ ಸದಸ್ಯರೂ ಸಂತೋಷದಿಂದಿರುತ್ತಾರೆ. ಮನೆ ಕೆಲಸದ ನಡುವೆಯೂ ನಿಮಗಾಗಿ ಎಂದು ಸ್ವಲ್ಪ ಸಮಯವನ್ನು ಮೀಸಲಿಡಿ. ಆ ಸಮಯದಲ್ಲಿ ನಿಮಗಿಷ್ಟವಾದ ಕೆಲಸವನ್ನು ಮಾಡಿ. ಅದು ಅಡುಗೆಯ ಕೆಲಸವಾಗಿರಬಹುದು, ಸಂಗೀತವಾಗಿರಬಹುದು, ಗೆಳತಿಯರ ಜೊತೆ ಮಾತನಾಡುವುದಾಗಿರಬಹುದು.

ಒಟ್ಟಿನಲ್ಲಿ ನಿಮ್ಮಿಷ್ಟದ ಹವ್ಯಾಸವನ್ನು ನಿಮಗಾಗಿ ಎಂದು ಮಾಡಿ. ದಿನದ ಸ್ವಲ್ಪ ವೇಳೆಯಾದರೂ ನಿಮಗಾಗಿ ಎಂದು ಕಳೆದರೆ ಆಗ ಸಿಗುವ ಸಂತೋಷವೇ ಬೇರೆ. ನಿಮ್ಮಿಷ್ಟದ ಕೆಲಸವನ್ನು ದಿನದಲ್ಲಿ ಒಮ್ಮೆಯಾದರೂ ಮಾಡಿದಾಗ ದಿನವಿಡೀ ಉಲ್ಲಾಸವಿರುತ್ತದೆ. ನಿಮ್ಮಲ್ಲಿ ನಿಮಗೆ ಆತ್ಮವಿಶ್ವಾಸ ಹೆಚ್ಚುತ್ತದೆ. ಆತ್ಮವಿಶ್ವಾಸವಿದ್ದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯ. ಹಲವಾರು ಕೆಲಸಗಳನ್ನು ಒಟ್ಟಿಗೆ ಮಾಡುವ ಗೃಹಿಣಿಯರೇ, ಹೆಮ್ಮೆಯಿಂದ ನಿಮ್ಮನ್ನು ನೀವು 'ಗೃಹಿಣಿ' ಎಂದು ಹೇಳಿಕೊಳ್ಳಿ. ಗೃಹಿಣಿಯಾಗಿರುವುದರ ಬಗ್ಗೆ ಗೌರವ ಪಡಿ. ■